ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE

## ಭತ್ತದ ತಳಿಯ ಸಂಶೋಧಕ ಪ್ರೊ.ಎಂ.ಮಹದೇವಪ್ಪ ನಿಧನ



ಮೈಸೂರು: ಭತ್ತದ ತಳಿ ಸಂಶೋಧನೆ ಮೂಲಕ ದೇಶಾದ್ಯಂತ ಹೆಸರುವಾಸಿಯಾಗಿದ್ದ ಪದ್ಮಭೂಷಣ ಪುರಸ್ಕೃತ ಪ್ರೊ.ಎಂ.ಮಹದೇವಪ್ಪ (ಭತ್ತದ ಮಹದೇವಪ್ಪ) ಶನಿವಾರ ಬೆಳಗ್ಗೆ ನಿಧನರಾದರು. ಮೃತರಿಗೆ ಪತ್ನಿ ಸುಧಾ, ಮಕ್ಕಳಾದ ಅಮೆರಿಕ ನಿವಾಸಿ ಡಾ| ಮಮತಾ ಮತ್ತು ರಾಜೇಂದ್ರ ಇದ್ದಾರೆ. ಮಹದೇವಪ್ಪ ಮೂಲತಃ ಚಾಮರಾಜನಗರ ಜಿಲ್ಲೆ ಮಾದಾಪುರ ಗ್ರಾಮದವರು. 1937ರ ಆಗಸ್ಟ್ 4ರಂದು ಜನಿಸಿದ್ದ ಇವರು, 1960ರಲ್ಲಿ ಹೆಬ್ಬಾಳಿನ ಕೃಷಿ ಕಾಲೇಜಿನಲ್ಲಿ ಪದವಿ, ಕೊಯಮುತ್ತೂರು ಕೃಷಿ ಕಾಲೇಜಿನಲ್ಲಿ ಪ್ರಥಮ ಸ್ಥಾನ ಮಾಸ್ಟರ್ ಮತ್ತು ಡಾಕ್ಟರೇಟ್ ಪದವಿ ಪಡೆದರು. ಧಾರವಾಡದ ಕೃಷಿ ವಿವಿಗೆ ಎರಡು ಬಾರಿ ಕುಲಪತಿಯಾಗಿದ್ದರು. ಮಧು, ಮಂಗಳ, ಪುಷ್ಪ, ಪ್ರಗತಿ, ವಿಕ್ರಮ, ಮುಕ್ತಿ, ಜಿಳಿಮುಕ್ತಿ ಮುಂತಾದ ಭತ್ತ ತಳಿಯನ್ನು ಶೋಧಿಸಿದ್ದರು.